ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು

ನಿಯಮ-72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:

ವಿಷಯ:

ಅನುದಾನಿತ ಶಾಲಾ ಕಾಲೇಜುಗಳಲ್ಲಿ ದಿನಾಂಕ:01.04.2006ರ ನಂತರ ನೇಮಕಗೊಂಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗೆ ಹಾಲಿ ನೀಡುತ್ತಿರುವ ಎನ್. ಪಿ. ಎಸ್ ಯೋಜನೆಯಿಂದ ಇದುವರೆವಿಗೂ ಯಾವೊಬ್ಬ ನೌಕರರಿಗೂ ಪ್ರಯೋಜನವಾಗುತ್ತಿಲ್ಲ. ಇವರೆಲ್ಲರೂ ಆರ್ಥಿಕ ತೊಂದರೆಗೊಳಗಾಗಿದ್ದಾರೆ. ಆದಕಾರಣ, ಸರ್ಕಾರಿ ನೌಕರರಿಗೆ ನೀಡುತ್ತಿರುವ ಮಾದರಿಯಲ್ಲಿ ಪಿಂಚಣಿ ಸೌಲಭ್ಯ ಮತ್ತು ಇತರೆ ಸೌಲಭ್ಯಗಳನ್ನು ಸರ್ಕಾರವು ಭರಿಸದೆ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಲಾಗಿದೆ.

**ಉತ್ತರ:**

ದಿನಾಂಕ:01.04.2006 ರ ನಂತರ ನೇಮಕಾತಿ ಹೊಂದಿದ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಸರ್ಕಾರದ ಆದೇಶ ಸಂಖ್ಯೆ: FD (S P L) 04 P E T 2005, ದಿನಾಂಕ: 31.03.2006ರನ್ವಯ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆ (ಎನ್.ಪಿ.ಎಸ್)ಒಳಪಡುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿ ಇ ಎನ್ 2018, ದಿನಾಂಕ:23.06.2018 ರಲ್ಲಿ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿಯನ್ನು ವಿಸ್ತರಿಸಲಾಗಿದೆ.

ದಿನಾಂಕ:01.04.2006 ರ ಪಿಂಚಣಿ ನೀತಿಯಲ್ಲಿ ಸರ್ಕಾರಿ ಅನುದಾನಿತ ಶಾಲೆಗಳ ನೌಕರರಿಗೆ ಪಿಂಚಣಿ ಒದಗಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: FD (S P L) 04 P E T 2005, ದಿನಾಂಕ: 31.03.2006ರ ಕ್ರಮ ಸಂಖ್ಯೆ: 08ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

...(8) ಸಹಾಯಾನುದಾನ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ಗೊತ್ತು ಮಾಡಿದ ಪ್ರಯೋಜನ ಪಿಂಚಣಿಯನ್ನು ದಿನಾಂಕ:೦೧.೦೪.೨೦೦೬ ರಂದು ಅಥವಾ ಅದರ ತರುವಾಯ ಸೇರುವ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗೆ ನಿಲ್ಲಿಸಿ ಬಿಡತಕ್ಕದ್ದು. ನೂತನ ನಿಗಧಿತ ವಂತಿಗೆ ಪಿಂಚಣಿ ಯೋಜನೆಯು, ಆಯ್ಕೆಯ ಅವಕಾಶದ ಆಧಾರದ ಮೇಲೆ ನೌಕರನಿಗೆ ಮತ್ತು ನಿಯೋಜಕನಿಗೆ ಅನ್ವಯವಾಗತಕ್ಕದ್ದು ಮತ್ತು ಆಯ್ಕೆಯ ಅವಕಾಶವನ್ನು ಇಬ್ಬರಿಂದಲೂ ಚಲಾಯಿಸತಕ್ಕದು. ಆದರೆ, ನಿಯೋಜಕರ ವಂತಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸತಕ್ಕದ್ದು. ಆದರೆ ರಾಜ್ಯ ಸರ್ಕಾರವಲ್ಲ.

- ಈ ಆದೇಶವು ದಿನಾಂಕ: 01/04/2006ರಿಂದ ಜಾರಿಗೆ ಬಂದಿರುತ್ತದೆ.
- ದಿನಾಂಕ: 01/04/2006ರ ನಂತರ ಅನುದಾನಸಹಿತ ಅನುಮೋದನೆಗೊಂಡ ಅನುದಾನಿತ ಖಾಸಗಿ ಶಾಲೆ/ ಕಾಲೇಜುಗಳಲ್ಲಿನ ಸಿಬ್ಬಂದಿಗಳಿಗೆ ಈ ಮೇಲಿನ ನಿಯಮ ಅನ್ವಯವಾಗುತ್ತದೆ.
- ಅನುದಾನಿತ ಸಿಬ್ಬಂದಿಗಳ ಸೇವಾ ಸೌಲಭ್ಯಗಳು ಅನುದಾನಸಹಿತವಾಗಿ ಅನುಮೋದನೆಗೊಂಡ ದಿನಾಂಕದಿಂದ ಅನ್ವಯವಾಗುತ್ತದೆ. ಆದುದರಿಂದ 2006 ರ ಪೂರ್ವದಲ್ಲಿ ಅನುದಾನರಹಿತವಾಗಿ ನೇಮಕಗೊಂಡ ಸಿಬ್ಬಂದಿಗಳು ದಿನಾಂಕ: 01/04/2006ರ ನಂತರ ಅನುದಾನಕ್ಕೆ ಒಳಪಟ್ಟಲ್ಲಿ ಅಂತಹ ಸಿಬ್ಬಂದಿಗಳು ಹೊಸ ಪಿಂಚಣಿ ಯೋಜನೆ (N P S ) ವ್ಯಾಪ್ತಿಗೆ ಒಳಪಡುತ್ತಾರೆ.
- ಮೇಲೆ ತಿಳಿಸಿರುವ ಅಂಶಗಳಿಗೆ ಒಳಪಟ್ಟು ಅನುದಾನಿತ ಸಿಬ್ಬಂದಿಗಳು ಇಚ್ಛೆ ಪಟ್ಟಲ್ಲಿ N P S ಯೋಜನೆಗೆ ಒಳಪಡಿಸಬಹುದಾಗಿದೆ.
- ಈ ಪಿಂಚಣಿ ಯೋಜನೆಯು ಸಂಪೂರ್ಣವಾಗಿ ಸ್ವ-ಇಚ್ಛಾ (optional) ನೆಲೆಯಲ್ಲಿ ಜಾರಿಗೊಳಿಸುವುದರಿಂದ ಕಡ್ಡಾಯಗೊಳಿಸಲು ಅವಕಾಶವಿರುವುದಿಲ್ಲ.

ಸಂಖ್ಯೆ: ಇಪಿ 296 ಎಸ್ಇಎಸ್ 2020

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು